ಸಂ.ತುಜಿಪಂ:ಆಡಳಿತ(7):ಇಂ.ವಿ/ವಿವ/75/12-13

ಜಿಲ್ಲಾ ಪಂಚಾಯತ್ ಕಾರ್ಯಾಲಯ.
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ: 26-07-2012

## <u>ಪತ್ರಿಕಾ ಪ್ರಕಟಣೆ</u>

ವಿಷಯ: ಸಕಾಲ ಯೋಜನೆಯಡಿಯಲ್ಲಿ ನಿವೃತ್ತ ಇಂಜಿನಿಯರ್‌ಗಳನ್ನು ( Retired Officials) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.

* * * * *

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 145 ಸೇಶಿಕಾ 2012 ಬೆಂಗಳೂರು ದಿನಾಂಕ: 03-07-2012ರ ಆದೇಶದ ರೀತ್ಯಾ ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ 10 ಜನ ಕಿರಿಯ ನಿವೃತ್ತಿ ಇಂಜಿನಿಯರ್‌ಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೇಮಕಾತಿ ಮಾಡಿಕೊಳ್ಳಲಾಗುವುದು. ಇಚ್ಛೆಯುಳ್ಳ ಆಸಕ್ತ ನಿವೃತ್ತ ಕಿರಿಯ ಇಂಜಿನಿಯರ್‌ಗಳು ಸ್ವವಿವರಗಳೊಂದಿಗೆ ದಿನಾಂಕ 05-08-2012 ರೊಳಗಾಗಿ ಈ ಕಛೇರಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಷರತ್ತುಗಳು:

1. ಅರ್ಹ ನೇಮಕಾತಿ ಹೊಂದಿದ ನಿವೃತ್ತ ಕಿರಿಯ ಇಂಜಿನಿಯರ್‌ಗಳಿಗೆ ಸಂಚಿತ ವೇತನ ಮಾಹೆಯಾನ ರೂ. 15,000-00 (ಹದಿನೈದು ಸಾವಿರ ರೂ) ಗಳನ್ನು ನೀಡಲಾಗುವುದು.
2. ನೇಮಕಾತಿ ಅವಧಿಯು 6 ತಿಂಗಳು ಮಾತ್ರ ಜಾರಿಯಲ್ಲಿರುತ್ತದೆ.
3. ಕಿರಿಯ ಇಂಜಿನಿಯರ್‌ಗಳ ಸೇವೆಯು ಪ್ರತಿ ನಿತ್ಯ ಅವಶ್ಯಕ ಇರುವುದರಿಂದ ಪ್ರತಿ ನಿತ್ಯವು ಕಛೇರಿಗೆ ಹಾಜರಾಗಬೇಕಾಗುತ್ತದೆ.
4. ಪ್ರತಿ ನಿತ್ಯವು ಕಛೇರಿಗೆ ಹಾಜರಾಗುವುದರಿಂದ ಸಾಂದರ್ಭಿಕ ಪಡೆಯಲು ಅರ್ಹರಾಗಿರುತ್ತಾರೆ.
5. ಸದರಿಯವರು ಸಾರ್ವಜನಿಕ ಸೇವೆಯಲ್ಲಿ ಉತ್ತಮ ಸ್ಪಂದನೆ ಹೊಂದಿದವರಾಗಿರಬೇಕು.
6. ಸದರಿಯವರುಗಳ ನಿವೃತ್ತಿ ವಯಸ್ಸು 65 ವರ್ಷಕ್ಕಿಂತ ಮೀರಿರದವರಾಗಿರಬೇಕು.

(ಗೋವಿಂದರಾಜು)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ತುಮಕೂರು.

ಶ್ರೀ. ಪ್ರತಿಯನ್ನು ಜಿಲ್ಲಾ ಸೂಚನಾಧಿಕಾರಿಗಳು, ಎನ್.ಐ.ಸಿ. ತುಮಕೂರು ಇವರಿಗೆ ರವಾನಿಸುತ್ತಾ ದಯಮಾಡಿ ಜಿಲ್ಲಾ ಪಂಚಾಯತ್ ವೆಬ್‌ನಲ್ಲಿ ಪ್ರಕಟಿಸಲು ಕೋರಿದೆ.

28/7/12
for ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ
ಜಿಲ್ಲಾ ಪಂಚಾಯತ್, ತುಮಕೂರು